ಎಂ.ಎ. ಕುಮಾರ್, ಬೆಂಗಳೂರು

*ದೇವಸ್ಥಾನದಲ್ಲಿ ದೇವರನ್ನು ಪ್ರಾರ್ಥಿಸುವಾಗ ಕಣ್ಣು ಮುಚ್ಚಿಕೊಳ್ಳುವುದೇಕೆ?*



ಮನುಷ್ಯ ಕಣ್ಣುಮುಚ್ಚಿಕೊಂಡರೂ ಕಾಪಾಡುವುದಕ್ಕೆ ದೇವನಿಗೆ ಕೊಡುವ ರಿಹರ್ಸಲ್ ಅದು.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಎಲ್ಲದಕ್ಕೂ ರಜ ಎಂಬುದಿರುವಾಗ ಈ ದೇವಸ್ಥಾನಗಳಿಗೆ ಮಾತ್ರ ರಜ ಇಲ್ಲದಿರಲು ಕಾರಣ?*

ಹುಶ್! ಮೆಲ್ಲಗೆ! ಎಲ್ಲದಕ್ಕೂ ರಜ ಇದೆ ಎಂಬುದನ್ನು ನಿಮ್ಮ ಹೆಂಡತಿ ಕೇಳಿಸಿಕೊಂಡರೆ ಅಪಾಯ/ಉಪವಾಸ!

ಎಂ.ಎಸ್. ಸೋಮಶೇಖರ್, ಮೈಸೂರು

*ಕಿರುಚಾಡುವ ಪತಿ, ಅರಚಾಡುವ ಪತ್ನಿಯ ದಾಂಪತ್ಯ ಹೇಗಿರುತ್ತದೆ?*

ಟೈಮ್ಸ್ ನೌ ವಾಹಿನಿಯ ನ್ಯೂಸ್ ಅವರ್‌ನಂತೆ.

ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು

*ರಾಜಕೀಯದವರು ಸ್ವಚ್ಛ ಬಟ್ಟೆ ಧರಿಸಿದಂತೆ ಸ್ವಚ್ಛ ಮಾತುಗಳು ಯಾಕೆ ಅವರ ಬಾಯಿಂದ ಬರುವುದಿಲ್ಲ?*

ಡಸ್ಟ್‌ಬಿನ್ನೇ ಹಾಗೆ; ಹೊರಗೆ ಥಳಥಳ, ಒಳಗೆ ಕೊಳೆಕೊಳೆ.

ಪಿ.ಜೆ. ರಾಘವೇಂದ್ರ, ಮೈಸೂರು

'ಜೈಲು' ಶಿಕ್ಷೆಯಾದರೆ 'ಜಾಮೀನು' ಏನು?




ಕಿಂಗ್ ಫಿಷರ್‌ನಂತೆ ಹಾರುವುದಕ್ಕೆ ಲೈಸೆನ್ಸ್.

ಮೋಹನರಾಜು ಎಸ್.ಎ., ಶಿವಮೊಗ್ಗ

*ಚುಂಬಕ ಗಾಳಿ ಬೀಸುವುದು ಯಾವ ಮಾಸದಲ್ಲಿ?*

ಶೃಂಗಾರಮಾಸದಲ್ಲಿ.

ವಿ.ಹೇಮಂತಕುಮಾರ್, ಬೆಂಗಳೂರು

*ಸಿಹಿಮುತ್ತು ಅಂತಾರಲ್ಲ, ನಿಜವಾಗ್ಲೂ ಮುತ್ತು ಸಿಹಿ ಇರುತ್ತಾ?*

ಹೂಂ. ಅಕ್ಕರೆಯ ಸಕ್ಕರೆ ಇರುತ್ತದಲ್ಲ!

ಸಿ.ಎನ್. ಶಾನುಭೋಗ್, ಮೈಸೂರು

*ಜೀವಿಗಳಲ್ಲೇ ಬುದ್ಧಿವಂತನೆನಿಸಿರುವ ಮನುಷ್ಯ ಹುಟ್ಟಿದಂದಿನಿಂದ ನಡೆದಾಡುವ ತನಕ 9 ತಿಂಗಳೇಕೆ ತೆಗೆದುಕೊಳ್ಳುತ್ತಾನೆ?*

ಅಮ್ಮನ ಹೊಟ್ಟೆಯಲ್ಲಿ 9 ತಿಂಗಳು ಮುದುರಿಕೊಂಡಿರುವ ಕೈಕಾಲು ನಡೆಯುವ ಮಟ್ಟಕ್ಕೆ ನೆಟ್ಟಗಾಗಲು 9 ತಿಂಗಳು ಬೇಕಂತೆ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಮುಗಿದುಹೋದುದಕ್ಕೆ ಅಳುವುದೇಕೆ?*

ಅಭಾವ ಭಾವವನ್ನು ಚಿಮ್ಮಿಸುವುದಂತೆ.

ಆರ್. ಮಧುಸೂದನ್, ಹಾಸನ

*ಧೃತರಾಷ್ಟ್ರನ ಮೇಲಿನ ಕೋಪಕ್ಕೆ ಶಕುನಿ ತನ್ನ ಸಹೋದರಿ ಗಾಂಧಾರಿಗೆ ಪುತ್ರಶೋಕವನ್ನು ಕೊಟ್ಟಿದ್ದು ತಪ್ಪಲ್ಲವಾ?*

ನಿಜ. ಆದರೆ ಈಗಿನಂತೆ ಆಗ ಕೇವಲ ಡೈವೋರ್ಸ್ ಮೂಲಕವೇ ಗಂಡನನ್ನು ಪಾಪರ್ ಮಾಡುವ ವ್ಯವಸ್ಥೆ ಇರಲಿಲ್ಲವಲ್ಲ.

ಎಚ್.ಆರ್.ಕಡಿವಾಲ, ಬಾದಾಮಿ

*ಇಂದು ಸಮಾಜದಲ್ಲಿ ಅವಿಭಕ್ತ ಕುಟುಂಬಗಳು ಕಡಿಮೆಯಾಗಲು ಕಾರಣವೇನು?*

ಪತ್ನಿಭಕ್ತ ಪತಿಯರು ಹೆಚ್ಚಾಗುತ್ತಿರುವುದರಿಂದ.

ಆರತಿ ಘಟಿಕಾರ್, ದುಬೈ

*ತನ್ನ ಪತಿಯೇ ಪರಮೇಶ್ವರ ಎಂದು ಪತ್ನಿಗೆ ಅನಿಸುವುದು ಯಾವಾಗ?*

ತನ್ನ ವಿಷಯಕ್ಕೆ ಬರದೆ ತೆಪ್ಪಗೆ ಧ್ಯಾನಭಂಗಿಯಲ್ಲಿ ಕುಳಿತಿರುವಾಗ.

ನಖಾತೆ ಆನಂದರಾವ್, ಬೆಂಗಳೂರು

*ದೇವರು ಒಂದುವೇಳೆ ಮಾನವನಿಗೆ ನೂರು ವರ್ಷಗಳ ಬದಲು ಇನ್ನೂರು ವರ್ಷ ಆಯುಷ್ಯ ಕೊಟ್ಟಿದ್ದರೆ ಏನಾಗುತ್ತಿತ್ತು?*

ನಿವೃತ್ತಿ ವೇತನ ಕೊಡುವುದರಲ್ಲೇ ಸರ್ಕಾರದ ಬೊಕ್ಕಸ ಖಾಲಿಯಾಗುತ್ತಿತ್ತು.

ಎಂ.ಎಸ್. ಮಂಜರ್, ಬಂಡಳ್ಳಿ

*ಪೋಲಿಯೋ ಮುಕ್ತವಾಗಿರುವ ಭಾರತ ಲಂಚಮುಕ್ತವಾಗುವುದು ಯಾವಾಗ?*

'ಅದು ನನ್ನ ಕಾಲದಲ್ಲಿ ಆಗುವುದಿಲ್ಲ' ಎಂದು ಗೋಳಾಡಿದನಂತೆ ಚತುರ್ಮುಖ ಬ್ರಹ್ಮ.

## ಬಹುಮಾನಿತ ಪ್ರಶ್ನೆ

ಗುಡಿಬಂಡೆ ಪಾರ್ಥಸಾರಥಿ, ಬಾಗೇಪಲ್ಲಿ

*ದೇವರು ಎನ್ನುವುದು ಒಂದು ಮಾನಸಿಕ ಸ್ಥಿತಿ ಅಷ್ಟೆ ಎಂದರು ಸಿಗ್ಮಂಡ್ ಫ್ರಾಯ್ಡ್. ನೀವೇನಂತೀರಿ?*

ಮಾನಸಿಕ ಅಸ್ಥಿರತೆಗೊಂದು ಊರುಗೋಲು ಎಂಬ ಅದ್ಭುತ ಕಲ್ಪನೆ.

ರತ್ನಜ, ಮೈಸೂರು

*ಪ್ರಶ್ನೆ ಕೇಳುವವರ ವಯಸ್ಸು ತಿಳಿಯುವ ಕುತೂಹಲ ನಿಮಗೆ ಇಲ್ಲವೆ?*

ಪ್ರಶ್ನೆಯಿಂದಲೇ ತಿಳಿಯುವುದಲ್ಲ! ಪ್ರಶ್ನೆ ಭವಿಷ್ಯತ್ತಿನದಾದರೆ ಯುವಕ, ವರ್ತಮಾನದ್ದಾದರೆ ಮಧ್ಯವಯಸ್ಕ, ಭೂತಕಾಲದ್ದಾದರೆ ಅಜ್ಜ!

ಬಿ.ಆರ್. ಸುರೇಶ್, ಶಿವಮೊಗ್ಗ

*ನಾನು ಕುಡುಕನಲ್ಲ, ಸಿಗರೇಟ್ ಸೇದುವುದಿಲ್ಲ. ಆದರೂ ರಾತ್ರಿ ಮನೆಗೆ ಬಂದಾಗ ಹೆಂಡತಿ ಬಾಯಿ ಹತ್ತಿರ ಮೂಸಿ ನೋಡುವಳಲ್ಲ?*



ತಿಳಿಯಿತು. ಆಕೆ ಟ್ರಾಫಿಕ್ ಇನ್‌ಸ್ಪೆಕ್ಟರ್ ಮಗಳು; ಯಾರನ್ನೇ ಮುಂದೆ ಚಲಿಸಲು ಬಿಡಬೇಕಾದರೂ ಮೂಸಿಯೇ ಬಿಡುವುದು!

ಪದ್ಮ ಪೂವಯ್ಯ, ಬೆಂಗಳೂರು

*ಸನ್ನಡತೆಯ ಆಧಾರದಲ್ಲಿ ಜೈಲಿನಿಂದ ಬಿಡುಗಡೆಯಾಗುತ್ತಿದ್ದ ಕೈದಿಗಳಿಗೆ ಅಧಿಕಾರಿಗಳು ಐಟಂ ಡ್ಯಾನ್ಸ್ ಉಡುಗೊರೆ ನೀಡಿದರಂತಲ್ಲಾ...?*

ಓಹ್! ಅರ್ಥವ್ಯತ್ಯಯ! ಸದ್ವಿಚಾರ, ಸದಾಚಾರಕ್ಕೆ ಅಧಿಕವಾಗಿ ಶತ್ರುವಾದವನೇ ಅಧಿಕಾರಿ (ಅಧಿಕ+ಅರಿ) ಎಂದಾಯ್ತು.

ಮುರಲೀಧರ ಕುಲಕರ್ಣಿ, ಬೀದರ್

*ರಾಜಕಾರಣಿಗಳಿಗೆ ಅವರ ಚೇಲಾಗಳು ಖಡ್ಗ ಹಾಗೂ ಗದೆಗಳನ್ನೇ ಏಕೆ ಕಾಣಿಕೆಯಾಗಿ ನೀಡುತ್ತಾರೆ?*

ಅವು ಮುಖಂಡನನ್ನು ಕೊಚ್ಚಬೇಕು, ಚಚ್ಚಬೇಕು ಎಂಬ ಚೇಲಾಗಳ ಮನದಾಳದ ಆಸೆಯನ್ನು ಬಿಂಬಿಸುತ್ತವಂತೆ.

■ ರಾಮ್